ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಈಗ ತಾವು ಹೊಸದಾಗಿ ಸುಮಾರು ಒಂದು ಲಕ್ಷ ರೂಪಾಯಿ ಅವ್ಯವಹಾರವಾಗಿದೆ, ಎಂದು ಒಂದು ಪ್ರಶ್ನೆ ಹಾಕಿದ್ದೀರಿ.

ಅಲ್ಲಿ ಕೊಬ್ಬರಿ ವ್ಯಾಪಾರ ಮಾಡಿಲ್ಲ, ಇನ್ನೂ ಹೆಚ್ಚಿನ ಸಂಪಾದನೆ ಮಾಡಬಹುದಿತ್ತು, ತಪ್ಪು ಮಾಡಿದ್ದಾರೆ, ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದಾರೆ. ಇಬ್ಬರೂ ಪ್ರಶ್ನೆಯನ್ನು ಹಾಕಿದ್ದಾರೆ. ಈ ಎರಡು ಪ್ರಶ್ನೆಗಳ ವಿಚಾರವಾಗಿಯೂ ಎನ್‌ಕ್ವೈರಿ ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರ

ಬಗರ್ ಹುಕುಂ ಸಾಗುವಳಿಯನ್ನು ಸಕ್ರಮೀಕರಿಸಲು ಅವಧಿ ಮೀರಿದ ನಂತರ ಬಂದ ಅರ್ಜಿಗಳ ಬಗ್ಗೆ

61. ಶ್ರೀ ಎಂ.ಸಿ. ವೀರಭದ್ರಯ್ಯ (ಕೊರಟಗೆರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಕಷ್ಟು ಮಂದಿ ರೈತರು ವಾಸ್ತವಿಕವಾಗಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದು, ಟಿ.ಟಿ. ಕಟ್ಟಿ ಸ್ವಾಧೀನ ಅನುಭವದಲ್ಲಿದ್ದು, ಅವಧಿ ಮೀರಿದ ನಂತರ ಜಮೀನು ಮಂಜೂರಾತಿಗಾಗಿ ಅರ್ಜಿಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರಾಜ್ಯದಲ್ಲಿ ಅಂತಹ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಇ) ಅವಧಿ ಮೀರಿದ ನಂತರ ಬಂದಿರುವ ಅರ್ಜಿಗಳನ್ನು ಸಕ್ರಮೀಕರಿಸಲು ತಾಲ್ಲೂಕು ಭೂ ಮಂಜೂರಾತಿ ಸಮಿತಿಯು ಕ್ರಮ ಕೈಗೊಳ್ಳಲು ಅವಕಾಶವಿದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಹೌದು. ಆದರೆ ವಾಸ್ತವಿಕವಾಗಿ ಸಾಗುವಳಿ ಮಾಡುವ ಬಗ್ಗೆ, ಸ್ವಾಧೀನ ಅನುಭವದಲ್ಲಿರುವ ಬಗ್ಗೆ ಹಾಗೂ ಟಿ.ಟಿ. ದಂಡ ಪಾವತಿ ಮಾಡಿರುವ ಬಗ್ಗೆ ಲಭ್ಯವಿರುವ ದಾಖಲೆಗಳೊಂದಿಗೆ ಪರಿಶೀಲಿಸಿದ ನಂತರವೇ ನಿಜಸ್ಥಿತಿಯನ್ನು ದೃಢೀಕರಿಸಬಹುದು.

ಆ) 28,723.

ಇ) ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):– ಮಾನ್ಯ ಉಪಾಧ್ಯಕ್ಷರೇ, ದಿನಾಂಕ: 31–12–92ರ ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿರುವ ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 42, 10, 62, 64, 65, 323, 351, 440, 860, 786, 905, 907 ಮತ್ತು 682 ಪ್ರಶ್ನೆಗಳನ್ನು ಹೊರತು ಪಡಿಸಿ, ಇನ್ನು ಉಳಿದ 26 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೈಸೂರು ಜಿಲ್ಲೆಯಲ್ಲಿ ಮಳೆಯಿಂದ ಕೆರೆಕುಂಟೆಗಳು

192. 449. ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಸತತ ಮಳೆಯಿಂದಾಗಿ ಎಷ್ಟು ಕೆರೆಕಟ್ಟೆಗಳು ಒಡೆದಿರುತ್ತವೆ ಮತ್ತು ಎಷ್ಟು ರಸ್ತೆಗಳು ಕೆಟ್ಟಿರುತ್ತವೆ. (ಪ್ರತಿಯೊಂದು ತಾಲ್ಲೂಕಿನ ವಿವರಗಳನ್ನು ಕೊಡುವುದು)

ಆ) ಇದರಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ಒಡೆದಿರುತ್ತವೆ ಮತ್ತು ಎಷ್ಟು ರಸ್ತೆಗಳು ಕೆಟ್ಟಿರುತ್ತವೆ ?

ಇ) ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ ?

ಈ) ಮೈಸೂರು ಜಿಲ್ಲೆಗೆ ವಿಶೇಷವಾಗಿ ಪಿರಿಯಾಪಟ್ಟಣಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ತಾಲ್ಲೂಕು	ರಸ್ತೆಗಳು	ಸೇತುವೆ ಅಡಿ ಸೇತುವೆ			ಸಣ್ಣ
		ಜಿ.ಪ.ಲೋ.ಇ.	ಜಿ.ಪ.	ಲೋಇ.	ನೀರಾವರಿ
ಕೊಳ್ಳೇಗಾಲ	9	–	1	–	–
ಪಿರಿಯಾಪಟ್ಟಣ	30	–	–	–	30
ಚಾಮರಾಜನಗರ	17	–	3	–	–
ಮೈಸೂರು ವಿಭಾಗ	–	56 ಕಿ.ಮೀ	–	–	–
ಚಾಮರಾಜನಗರ ವಿಭಾಗ	–	405 ಕಿ.ಮೀ	–	2	–

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಒಡೆದು ಹೋಗಿರುವ ಕೆರೆಗಳು ಮತ್ತು ರಸ್ತೆಗಳ ವಿವರ ಈ ಕೆಳಗಿನಂತಿವೆ.

ಕೆಟ್ಟಿರುವ ರಸ್ತೆಗಳು – 30
ಒಡೆದಿರುವ ಕೆರೆಗಳು – 12
ಹಾನಿಯಾದ ಕೆರೆಗಳು – 18

ಇ) ಒಡೆದು ಹೋಗಿರುವ, ಹಾನಿಯಾದ ಕೆರೆಗಳು ಮತ್ತು ಕೆಟ್ಟು ಹೋಗಿರುವ ರಸ್ತೆಗಳಿಗೆ ದುರಸ್ತಿಗಾಗಿ ಶೀಘ್ರವೇ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಮೈಸೂರು ಜಿಲ್ಲೆ ರೂ. 62.87 ಲಕ್ಷ
ಪಿರಿಯಾಪಟ್ಟಣ ತಾಲ್ಲೂಕು ರೂ. 2.10 ಲಕ್ಷ

ಬಿಡುಗಡೆ ಮಾಡಿದೆ.

ಇತ್ತೀಚಿನ ಪ್ರವಾಹದಿಂದ ಉಂಟಾಗಿರುವ ನಷ್ಟದ ಪ್ರಮಾಣ

193. 462. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚಿನ ಪ್ರವಾಹದಿಂದ ರಾಜ್ಯದಲ್ಲಿ ಉಂಟಾಗಿರುವ ಹಾನಿಯ ಪ್ರಮಾಣ (ಮನೆಗಳು, ಬೆಳೆಗಳು, ಪ್ರಾಣಿಗಳು ವಿವರಗಳು ಪ್ರತ್ಯೇಕವಾಗಿರಬೇಕು–ಭೂಸವೆತ, ರಸ್ತೆ, ಸೇತುವೆ, ಕಟ್ಟಡಗಳು, ಇತ್ಯಾದಿ ಸರ್ಕಾರಿ ಆಸ್ತಿ–ಪಾಸ್ತಿಗಳು)

ಆ) ನೆರೆ ಹಾವಳಿ ಪ್ರದೇಶಗಳಲ್ಲಿ ನೀಡಲಾದ ಸಹಾಯ ಧನದ ಮೊತ್ತ.